> ಇರುವ ಬದುಕನ್ನು ಬರೆಯುವುದಾದರೆ ನನಗಲ್ಲಿ ಕೆಲಸವಿಲ್ಲ. ಅನ್ವೇಷಣೆಯ ಪ್ರಕ್ರಿಯೆ ನನಗಿಷ್ಟ. ಕಲ್ಪನೆಯ ಸುರುಳಿಯಿಂದ ನಿಧಾನವಾಗಿ ರೂಪು ತಳೆಯುತ್ತಾ ಪಾತ್ರಗಳು ಮೈದಳೆಯುವ ರೀತಿ ಕುತೂಹಲಕರ.

ಸ್ವಲ್ಪ ಮಟ್ಟಿಗೆ ಹೌದು. ನಗರವು ಅವರಿಗೆ ಆಕರ್ಷಣೀಯವಾಗಿತ್ತು. ಹಳೆಯದನ್ನು ಮರೆಸುವ ವಾಗ್ದಾನದಂತೆಯೂ ಕಂಡಿತು. ಸ್ವಾತಂತ್ರ್ಯದ ಸಾಧ್ಯತೆಯನ್ನು ತೋರಿತು. ಅದು ನಿಮ್ಮ ಗತದಿಂದ ಬಿಡುಗಡೆ ಅಂತ ಅನ್ನಿಸಲೂ ಬಹುದು. ಆದರೆ, ಗತದಿಂದ ಬಿಡುಗಡೆ ಅಷ್ಟು ಸುಲಭವಲ್ಲ. ಅದು ನಿಮ್ಮನ್ನು ಅತಿಕ್ರಮಿಸಿ ಬಂಧಿಸಲು ಯತ್ನಿಸುತ್ತದೆ. ನಗರದ ಆಕರ್ಷಣೆಯನ್ನೂ ಮೀರಿ ಅದನ್ನು ಎದುರಿಸಿ ನಿಂತಾಗಲೇ ನಿಜ ಅರ್ಥದಲ್ಲಿ ಅದರಿಂದ ಬಿಡುಗಡೆಗೊಳ್ಳಲು ಸಾಧ್ಯ. ಯಾವುದನ್ನು ಮರೆಯಬೇಕು ಯಾವುದನ್ನು ನೆನಪಿಟ್ಟುಕೊಳ್ಳಬೇಕು ಎಂದು ಅರಿತಾಗ ಇದು ಸಾಧ್ಯವಾಗುತ್ತದೆ.

◆ 'Jazz'ನಲ್ಲಿನ ಪ್ರತಿಮೆಯ ಬಗ್ಗೆ ಏನು ಹೇಳುವಿರಿ?

'Jazz'ನಲ್ಲಿ ಕೌಶಲ ಹಾಗೂ ಸುಧಾರಣೆ ಈ ಎರಡು ವೈರುಧ್ಯಗಳನ್ನು ಒಂದೆಡೆ ತೋರಲು ಬಯಸಿದೆ. ಯೋಚಿಸಿ ರೂಪಿಸಿದ ಕಲಾಕೃತಿಯೊಂದು ಜಾಝ್ ರೀತಿಯಲ್ಲಿ ಹೊಸದಾಗಿ ಅನ್ವೇಷಿಸಿದಂತೆ ಕಾಣಬಹುದು. ಪುಸ್ತಕವನ್ನು ಆ ಕೃತಿಯಲ್ಲಿ ಪ್ರತಿಮೆಯಾಗಿ ಬಳಸಿದೆ. ನನಗದು ಕೌಶಲ ಮತ್ತು ಸುಧಾರಣೆಯಂತೆ ಅನ್ನಿಸಿತು. ಅಭ್ಯಾಸ ಮಾಡುತ್ತಾ ಯೋಚಿಸುತ್ತಾ ಹೊಸತನ್ನು ಅನ್ವೇಷಿಸಿದಂತೆ. ಅದರಲ್ಲಿ ತಪ್ಪು ಮಾಡುವುದು, ಸೋಲುವುದು ಕೂಡ ಇದೆ. ಏಕೆಂದರೆ, ಜಾಝ್ ಪ್ರದರ್ಶನ ಕಲೆ.

ಲೇಖಕನಿಗಿರುವ ತಿದ್ದುಪಡಿಯ ಸವಲತ್ತು ಪ್ರದರ್ಶನ ಕಲಾವಿದನಿಗಿರುವುದಿಲ್ಲ. ಪ್ರದರ್ಶನ ಕಲಾವಿದ ತಪ್ಪಾದಾಗ ಅದನ್ನು ಅಲ್ಲೇ ಸಂಭಾಳಿಸಬೇಕು. ಆಗ ಹೊಸತೇನಾದರೂ ಸೃಷ್ಟಿಯಾದರೆ ಅದು ಕಲಾವಿದನನ್ನು ಮತ್ತೊಂದು ಎತ್ತರಕ್ಕೆ ತಲುಪಿಸುತ್ತದೆ. 'Jazz' ತನ್ನ ಕತೆಯನ್ನು ನಿರೂಪಿಸುತ್ತದೆ. ಕೆಲವೊಮ್ಮೆ ಸರಿಯಾಗಿ ಕಲ್ಪಿಸಿಕೊಳ್ಳದ ಕಾರಣದಿಂದ ಪಾತ್ರಗಳು ಸರಿಯಾಗಿ ರೂಪುಗೊಳ್ಳುವುದಿಲ್ಲ. ಅದು ತಪ್ಪನ್ನು ಒಪ್ಪಿಕೊಳ್ಳುತ್ತದೆ. ಪಾತ್ರಗಳು ಮಾತನಾಡುತ್ತವೆ. ಪುಸ್ತಕ ಪಾತ್ರಗಳ ಮಾತನ್ನು ಕೇಳಿಸಿಕೊಂಡು ಅವುಗಳಿಂದ ಕಲಿಯುತ್ತದೆ. ಅದು ನಾನು ಬರೆದ ಸಂಕೀರ್ಣ ಕೃತಿ.

◆ ನಿಮ್ಮ ಕೃತಿಗಳಲ್ಲಿ ಹಲವು ದನಿಗಳು ಕೇಳಿಸುತ್ತವೆಯಲ್ಲ, ಯಾಕೆ?

ಒಂದೇ ರೀತಿಯ ದೃಷ್ಟಿಕೋನ ಹೊಂದದಿರುವುದು ಮುಖ್ಯ. ಅಮೆರಿಕನ್ ಸಾಹಿತ್ಯದಲ್ಲಿ ಒಂದೇ ರೀತಿಯ ದೃಷ್ಟಿಕೋನ ಮಾತ್ರ ಇದೆ. ನಾವೆಲ್ಲ ಬೇರೆಬೇರೆ, ಎಲ್ಲ ಸಮಯದಲ್ಲಿ ಎಲ್ಲರೂ ಒಂದೇ ರೀತಿ ವರ್ತಿಸುವುದಿಲ್ಲ.

◆ ಭಿನ್ನತೆಯನ್ನು ಒಟ್ಟಾಗಿ ಒಳಗೊಳ್ಳುವುದು ಸಮಗ್ರತೆಯೇ?

ಹೌದು. ಮತ್ಯಾರೋ ನಮ್ಮ ಪರವಾಗಿ ಅಧಿಕೃತವಾಗಿ ಮಾತಾಡುವುದಲ್ಲ. ಒಂದಕ್ಕಿಂತ ಒಂದು ಭಿನ್ನವಾದ ಎಲ್ಲ ಬಗೆಯ ದನಿಗಳಿಗೆ ಮನ್ನಣೆ ನೀಡಲು ಬಯಸುತ್ತೇನೆ. ಆಫ್ರಿಕನ್ ಅಮೆರಿಕನ್ ಸಂಸ್ಕೃತಿಯಲ್ಲಿ ನನ್ನನ್ನು ಸೆಳೆಯುವುದು ಇಲ್ಲಿನ ವೈವಿಧ್ಯತೆ. ಸಮಕಾಲೀನ ಸಂಗೀತದಲ್ಲಿ ಎಲ್ಲರೂ ಒಂದೇ